iii) ವಿಷಯ : ಆಂಧ್ರ ಪ್ರದೇಶದಲ್ಲಿ ದಲಿತರ ಮೇಲೆ ಆಗಿರತಕ್ಕಂಥ ಬರ್ಬರ ಕೃತ್ಯಗಳನ್ನು ಖಂಡಿಸಬೇಕೆಂದು ಕರ್ನಾಟಕ ರಾಜ್ಯದ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರ ಚಳುವಳಿ

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ನಾನು ಈ ಸದನದಲ್ಲಿ ಪ್ರಸ್ತಾಪ ಮಾಡಲಿಕ್ಕೆ ತಮ್ಮ ಅನುಮತಿಯನ್ನು ಕೋರಿ ಪತ್ರವನ್ನು ಕಳಿಸಿದ್ದೇನೆ. ಕಳೆದ ಒಂದು ವಾರದಿಂದ ಕರ್ನಾಟಕ ರಾಜ್ಯದ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ಇಡೀ ರಾಜ್ಯದಾದ್ಯಂತ ಚಳುವಳಿ ಮಾಡುತ್ತಿದ್ದಾರೆ. ಈ ಬಗ್ಗೆ ನಾನು ಮುಖ್ಯವಾಗಿ ಗೃಹ ಮಂತ್ರಿಗಳ ಗಮನವನ್ನು ಸೆಳೆಯಲು ಬಯಸುತ್ತೇನೆ. ಒಂದು ವಾರದಿಂದ ನಮ್ಮ ರಾಜ್ಯದಲ್ಲಿನ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರುಗಳು ಆಂಧ್ರ ಪ್ರದೇಶದಲ್ಲಿ ದಲಿತರ ಮೇಲೆ ಆಗಿರತಕ್ಕಂತಹ ಬರ್ಬರ ಕೃತ್ಯಗಳನ್ನು ಖಂಡಿಸಬೇಕೆಂದು ಇದ್ದಾರೆ.

ಆಂಧ್ರಪ್ರದೇಶದಲ್ಲಿ ದಲಿತರ ಮೇಲೆ ಬರ್ಬರ ಕೃತ್ಯ ಏನು ನಡೆದಿದೆ, ಅದು ಈವೊಂದು ಪ್ರಜಾ ಪ್ರಭುತ್ವ ವ್ಯವಸ್ಥೆಯನ್ನು ಅಲ್ಲಾಡಿಸತಕ್ಕ ಅವಮಾನಕರವಾದ ಪ್ರಸಂಗ, ಘಟನೆ ಏನು ನಡೆದಿದೆ ನಾವೆಲ್ಲರೂ ತಲೆತಗ್ಗಿಸತಕ್ಕಂಥ ಕೃತ್ಯ ಏನು ನಡೆದಿದೆ ಅದನ್ನು ಖಂಡನೆ ಮಾಡಿ ರಾಜ್ಯದಲ್ಲಿ ಸಾವಿರಾರು ಜನ ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರು ರಸ್ತೆ ತಡೆ ಮತ್ತು ಬಸ್ಸುಗಳನ್ನು ನಿಲ್ಲಿಸತಕ್ಕ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಪ್ರಬಲವಾದ ಒಂದು ಚಳುವಳಿಯನ್ನು ಮಾಡುತ್ತಿದ್ದಾರೆ. ಅವರ ನೋವಿಗೆ ಸ್ಪಂಧಿಸುವುದು ನಮ್ಮ ಕರ್ತವ್ಯವೆಂದು ನಾನು ತಿಳಿದಿದ್ದೇನೆ. ಈ ಸಭೆಯಲ್ಲಿ ಸಂವಿಧಾನದ ಪ್ರಕಾರವಾಗಿ, ನಮ್ಮ ಸದನದ ಕಾನೂನು ಪ್ರಕಾರವಾಗಿ ಆಂಧ್ರಪ್ರದೇಶದಲ್ಲಿ ನಡೆದಿರತಕ್ಕ ಘಟನೆಯನ್ನು ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲವೆನ್ನುವ ವಿಚಾರವೂ ನನಗೆ ಗೊತ್ತಿದೆ. ಇದನ್ನು ಪ್ರಸ್ತಾಪ ಮಾಡುವುದಕ್ಕೆ ಲೋಕಸಭೆ ಸರಿಯಾದ ಸದನವೆಂದೂ ನನಗೆ ಗೊತ್ತಿದೆ. ಆದರೆ ಹೃದಯವನ್ನು ಕಲಕತಕ್ಕ ಕೃತ್ಯ ಏನು ನಡೆದಿದೆ, ಅಲ್ಲಿ ಪ್ರಾಣವನ್ನು ಕಳೆದುಕೊಂಡಿರತಕ್ಕವರ ಸಂಬಂಧಿಕರು ಏನು ದುಃಖದಲ್ಲಿದ್ದಾರೆ, ಈ ಬರ್ಬರ ಕೃತ್ಯವನ್ನು ಖಂಡಿಸತಕ್ಕದ್ದು ನಮ್ಮೆಲ್ಲರ ಕರ್ತವ್ಯವೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ದಲಿತ ಸಂಘರ್ಷ ಸಮಿತಿಯವರು ಬಹಳ ಪ್ರಬಲವಾದ ಚಳುವಳಿಯನ್ನು ರಾಜ್ಯದಲ್ಲಿ ಮಾಡಬೇಕೆಂದಿದ್ದಾರೆ. ನಾವೆಲ್ಲರೂ ಸಹಿತ ಅದಕ್ಕೆ ಸಮ್ಮತಿಯನ್ನು ಕೊಡುತ್ತೇವೆ. ಏಕೆಂದರೆ ಇಂತಹ ಕೃತ್ಯ ನಿನ್ನೆ ಆಂಧ್ರದಲ್ಲಿ ನಡೆದಿದೆ. ನಾಳೆ ಪಕ್ಕದಲ್ಲಿರತಕ್ಕ ಗುಲ್ಬರ್ಗ, ಬೀದರ್, ರಾಯಚೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಇದರ ಪರಿಣಾಮ ಆಗಬಹುದು ಎನ್ನುವ ಶಂಕೆ ನನ್ನಲ್ಲಿದೆ. ಇಂತಹ ಒಂದು ಕೆಟ್ಟ ಪರಿಣಾಮ ನಮ್ಮ ದೇಶದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಆಗತಕ್ಕದ್ದು ಇದೆಯೆಂದು ನನ್ನ ಭಾವನೆ. ಈಗ ಮಾನ್ಯ ಪ್ರಧಾನ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಎಲ್ಲಾ ರಾಜ್ಯಗಳ ಮುಖ್ಯ ಮಂತ್ರಿಗಳನ್ನು ಕರೆಸಿ ಇಡೀ ದೇಶದಲ್ಲಿ ದುರ್ಬಲವರ್ಗದವರ ಮೇಲೆ, ದಲಿತರ ಮೇಲೆ ಆಗುತ್ತಾ ಇರತಕ್ಕ ಅತ್ಯಾಚಾರ ಅನ್ಯಾಯ ಮತ್ತು ದಬ್ಬಾಳಿಕೆಗಳನ್ನು ಖಂಡಿಸಿ ಇದರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಒಂದು ಸಭೆಯನ್ನು ಕರೆಯುತ್ತೇನೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ಸಭೆಗೆ ನಮ್ಮ ಮುಖ್ಯ ಮಂತ್ರಿಗಳೂ ಸಹಿತ ಹೋಗುವವರಿದ್ದಾರೆಂದು ನನಗೆ ತಿಳಿದು ಬಂದಿದೆ. ಆದ್ದರಿಂದ ನಾನು ಮಾನ್ಯ ಅಧ್ಯಕ್ಷರಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಈ ವರ್ಗದ ಜನಗಳ ಮೇಲೆ ಈಗಲೂ ಕೂಡ ಅನೇಕ ಕಡೆಗಳಲ್ಲಿ ಇಂತಹ ದೌರ್ಜನ್ಯಗಳು ನಡೆಯುತ್ತಿವೆ. ಪಕ್ಷಾತೀತವಾಗಿ ಇಡೀ ಸಮಾಜದಲ್ಲಿರತಕ್ಕ ಪಟ್ಟಭದ್ರಾ ಹಿತಾಸಕ್ತಿಗಳನ್ನು

ತಡೆಗಟ್ಟುವ ದೃಷ್ಟಿಯಿಂದ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ದಲಿತ ಸಂಘರ್ಷ ಸಮಿತಿಯವರು ರಾಜ್ಯದಲ್ಲಿ ಚಳುವಳಿಯನ್ನು ಬಹಳ ಪ್ರಬಲವಾಗಿ ಮಾಡುವುದಕ್ಕೆ ಹೊರಟಿದ್ದಾರೆ. ನಾಳೆಯ ದಿವಸ ಅಥು ಕಾನೂನಿನ ಪರಿಸ್ಥಿತಿ ಸಮಸ್ಯೆ ಅಥವಾ ಆಗಬಾರದು. ಆ ಕಾರಣದಿಂದ ಸರ್ಕಾರದ ವಕ್ತಾರರು, ಮುಖಂಡರು ದಲಿತ ಸಂಘರ್ಷ ಸಮಿತಿಯ ಕಾರ್ಯಕರ್ತರನ್ನು ಕರೆಸಿ ಮಾತನಾಡಿ, ಅವರ ಸಮಸ್ಯೆಗೆ ಸರಿಯಾದ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಬದಲ್ಲಿ ನಾನು ಒತ್ತಾಯ ಮಾಡುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಏನೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ, ಅದಕ್ಕೆ ನಾನು ಸಹ ಧ್ವನಿಗೂಡಿಸುತ್ತಾ, ಆಂಧ್ರ ಪ್ರದೇಶದಲ್ಲಿ ನಡೆದಿರತಕ್ಕ ಕೃತ್ಯ ನಿಜವಾಗಿಯೂ ಅತ್ಯಂತ ಗಂಭೀರವಾದುದು ಮತ್ತು ಬರ್ಬರವಾದುದು. ಅದನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇಲ್ಲದಿದ್ದರೂ ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ನಡೆದಿರತಕ್ಕದ್ದು ಇದೆ. ಇದು ಬಹಳ ಅನ್ಯಾಯ.

ಅಧ್ಯಕ್ಷರು : ನಮ್ಮ ದೇಶದ ಫೆಡರಲ್ ಸಿಸ್ಟಮ್ ಬಿಟ್ಟು ಬಿಟ್ಟು, ಯೂನಿಟೆರಿ ಸಿಸ್ಟಮ್ ಮಾಡಿಕೊಳ್ಳಬೇಕೆಂದು ಹೇಳುತ್ತೀರಾ? ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಆಂಧ್ರದಲ್ಲಿ ಒಂದೇ ಕಡೆ ಇಂತಹ ಕೃತ್ಯಗಳು ನಡೆಯುತ್ತಿಲ್ಲ. ಇಡೀ ದೇಶದಲ್ಲಿ ಇಂತಹದ್ದು ನಡೆಯುತ್ತಿದೆ. ಅದರ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ತಾವು ಕೊಡಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ಈ ಬರ್ಬರ ಕೃತ್ಯವನ್ನು ಖಂಡಿಸತಕ್ಕ ಕೆಲಸವನ್ನು ಭಾರತೀಯ ಜನತಾ ಪಾರ್ಟಿಯವರು ಮತ್ತು ದಲಿತ ಸಂಘರ್ಷ ಸಮಿತಿಯವರು ಸೇರಿ ಮಾಡಿದ್ದೇವೆ.

ಅಧ್ಯಕ್ಷರು : ನೀವು ಭಾರತೀಯ ಜನತಾ ಪಾರ್ಟಿಯವರು ಏನು ಮಾಡಿದ್ದೀರಿ ಎನ್ನುವುದನ್ನು ಈ ಸಬೆಗೆ ತಿಳಿಸುವುದು ಹೇಗೆ ಪ್ರಕೃತವಾಗುತ್ತದೆ? ದಯವಿಟ್ಟು ತಾವು ಸಹ ಕುಳಿತುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮಾತನ್ನು ನಾನು ಒಪ್ಪುತ್ತೇನೆ.

ಅಧ್ಯಕ್ಷರು : ಸದನದಲ್ಲಿ ಮಾನ್ಯ ಸದಸ್ಯರು ಯಾವುದಾದರೂ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದಿದ್ದರೆ ತಾವು ಒಂದು ಮೋಷನ್ ಕಳುಹಿಸಬೇಕು. ಒಂದು ನಿರ್ಣಯ ಕಳುಹಿಸಬೇಕು ಅಥವಾ ಏನಾದರೂ ಒಂದು ನೋಟೀಸ್ ನನಗೆ ಕೊಡಬೇಕು. ಏಕಾಏಕಿ ಹೀಗೆ ಪ್ರಸ್ತಾಪ ಮಾಡುವುದು ಸರಿಯಲ್ಲ. ಮಾನ್ಯ ಸಿಂಧ್ಯಾರವರು ಒಂದು ಪತ್ರವನ್ನು ಕಳುಹಿಸಿದ್ದಾರೆ. ಅದು ಅರ್ಧಗಂಟೆ ಮುಕ್ಕಾಲು ಗಂಟೆ ಕೆಳಗೆ ನನ್ನ ಕೈ ಸೇರಿತು. ಸಾಧಾರಣವಾಗಿ ಪಾರ್ಲಿಮೆಂಟರಿ ಸಂಪ್ರದಾಯವೇನೆಂದರೆ, i.e., Various leaders of groups , including Leader of the Opposition ಯಾವುದಾದರೂ ಜರೂರು ಅಥವಾ ಅತ್ಯಂತ ಪ್ರಾಮುಖ್ಯವಾದ ವಿಚಾರ ಸದನದ ಮುಂದೆ ಬರಬೇಕು ಅದನ್ನು ಸದನದಲ್ಲಿ ಎತ್ತಬೇಕು ಎಂಬ ಉದ್ದೇಶವಿದ್ದರೆ ಪೂರ್ವಭಾವಿಯಾಗಿ ಬಂದು

ನನ್ನ ಜೊತೆಯಲ್ಲಿ ಮಾತನಾಡಿ ಆ ವಿಷಯದ ಬಗ್ಗೆ ಸೂಕ್ಷ್ಮವಾಗಿ ವಿವರಿಸಿ ನನಗೆ ಹೇಳುತ್ತಾರೆ.

ಆದರೆ ಏಕಾಏಕಿ ಬಂದು ಆಂಧ್ರದಲ್ಲಿ ಹೀಗೆ ನಡೆಯಿತು, ನಾವು ಅದಕ್ಕೆ ಸ್ಪಂದಿಸಬೇಕು ಎಂದು ಹೇಳಿದರೆ ಹೇಗೆ? ಆ ವಿಚಾರದ ಬಗ್ಗೆ ಎರಡು ಅಭಿಪ್ರಾಯ ಇಲ್ಲವೇ ಇಲ್ಲ, ದಲಿತರ ಮೇಲೆ ಎಲ್ಲೇ ಅನ್ಯಾಯ ನಡೆದರೂ ಅದನ್ನು ಖಂಡಿಸಬೇಕು. ಇದರ ಬಗ್ಗೆ ಈ ಸಭೆ ಒಟ್ಟಿಗಿದೆ ಮತ್ತು ಇದರ ಬಗ್ಗೆ ಎರಡು ಅಭಿಪ್ರಾಯ ಇಲ್ಲ, ಆದೂ ಅಲ್ಲದೆ ಇದು ಆಂಧ್ರಪ್ರದೇಶದಲ್ಲಿ ನಡೆದಿರತಕ್ಕಂಥ ಎಚಾರ. ಇದು ನಮ್ಮ .ರಾಜ್ಯದಲ್ಲಿ ನಡೆಯದೇ ಇರಲಿ ಎಂದು ಆಸೆ ಮಾಡಿ ಸುಮ್ಮನಿರೋಣ.

ಒಬ್ಬರು ಮಾನ್ಯ ಸದಸ್ಯರು : ಗೃಹ ಮಂತ್ರಿಗಳು ಏನು ಹೇಳುತ್ತಾರೆ.

ಅಧ್ಯಕ್ಷರು : ಆಂಧ್ರಪ್ರದೇಶದಲ್ಲಿ ಘಟನೆ ನಡೆದಿರುವುದಕ್ಕೆ ನಮ್ಮ ಗೃಹಮಂತ್ರಿಗಳು ಏನು ಮಾಡುತ್ತಾರೆ?

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರ ಇದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಹೇಳಬಹುದು.

ಶ್ರೀ ಧರ್ಮಸಿಂಗ್ (ಗೃಹ ಮತ್ತು ಅಬಕಾರಿ ಮಂತ್ರಿಗಳು): ಮಾನ್ಯ ವಿರೋಧ ಪಕ್ಷದ ಉಪನಾಯಕರಾದ ಶ್ರೀ ಸಿಂಧ್ಯರವರು , ದೇಶಪಾಂಡೆಯವರು ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಏನು ಅಭಿಪ್ರಾಯ ವ್ಯಕ್ತ ಮಾಡಿದ್ದಾರೆ, ಈಗಾಗಲೇ ದಲಿತ ಸಂಘರ್ಷ ಸಮಿತಿಯ ನಾನಾ ಘಟಕಗಳ ಅಧ್ಯಕ್ಷರು ಮತ್ತು ಸದಸ್ಯರ ಜೊತೆಯಲ್ಲಿ ನಾನು ಮಾತನಾಡಿದ್ದೇನೆ. ಆಂಧ್ರ ಪ್ರದೇಶದಲ್ಲಿ ಏನು ಆಗಿದೆ, ಅದರ ಬಗ್ಗೆ ಗಂಭೀರವಾದ ತಮ್ಮ ಅಭಿಪ್ರಾಯಗಳನ್ನು ಅವರು ವ್ಯಕ್ತಪಡಿಸಿದ್ದಾರೆ. ಸರ್ಕಾರಕ್ಕೆ ಕೂಡ ಹೇಳಿದ್ದಾರೆ ಈಗಾಗಲೇ ತಾವು ಹೇಳಿದ ಹಾಗೆ, ಇದು ಆಂಧ್ರದಲ್ಲಿ ನಡೆದಿರುವಂಥ ಘಟನೆ. ಇದರ ಬಗ್ಗೆ ಪ್ರಧಾನ ಮಂತ್ರಿಗಳು ಕೂಡ ಹೇಳಿದ್ದಾರೆ. ಸಂಬಂಧಪಟ್ಟ ಮುಖ್ಯ ಮಂತ್ರಿಗಳ ಸಭೆಯನ್ನು ಕೂಡ ಶೀಘ್ರದಲ್ಲೇ ಕರೆಯುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ. ಇದು ರಾಷ್ಟ್ರಮಟ್ಟದಲ್ಲಿ ಚರ್ಚೆಯಾಗಿ ನಿರ್ಧಾರ ತೆಗೆದುಕೊಳ್ಳುವಂಥಾದ್ದು. ಮತ್ತು ಇಲ್ಲಿ ಇರುವ ದಲಿತ ಸಂಘರ್ಷ ಸಮಿತಿಯವರು ಏನು ಚಳುವಳಿ ಮಾಡುವುದಕ್ಕೆ ಹೊರಟಿದ್ದಾರೆ, ಅವರನ್ನು ಕೂಡ ಕರೆಸಿ ನಾನು ಮಾತನಾಡುತ್ತೇನೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು .....

iv) ವಿಷಯ : ಶೇಂಗಾ ಮೇಲೆ 15 ಪರ್ಸೆಂಟ್ ಟ್ಯಾಕ್ಸ್ ಹೆಚ್ಚು ಮಾಡಿರುವುದರಿಂದ ಉತ್ತರ ಕರ್ನಾಟಕದಲ್ಲಿ ಆಯಿಲ್ ಮಿಲ್‌ಗಳು ಬಂದ್ ಆಗಿರುವುದು.

ಶ್ರೀ ಎಸ್.ಎಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಉತ್ತರ ಕರ್ನಾಟಕದಲ್ಲಿ ಆಯಿಲ್ ಮಿಲ್‌ಗಳು ಬಂದ್ ಆಗಿವೆ. ಶೇಂಗಾ ಮೇಲೆ 17 ಪರ್ಸೆಂಟ್ ಟ್ಯಾಕ್ಸ್ ಹೆಚ್ಚಿಗೆ ಕೇಳುತ್ತಿದ್ದಾರೆ.....

ಅಧ್ಯಕ್ಷರು : ಅದನ್ನು ಕಡಿಮೆ ಮಾಡಿಸೋಣ ಬಿಡಿ.

ಶ್ರೀ ಎಸ್.ಎಚ್. ಕೌಜಲಗಿ : ಇದರ ಪರಿಣಾಮವಾಗಿ 60ರಿಂದ 70ರವರೆಗೆ...

ಅಧ್ಯಕ್ಷರು : ಅವಿಶ್ವಾಸ ನಿರ್ಣಯ ಬರುತ್ತದೆ, ಕುಳಿತುಕೊಳ್ಳಿ.

ಶ್ರೀ ಎಸ್.ಎಚ್. ಕೌಜಲಗಿ : ಇದು ಬಹಳ ಮುಖ್ಯವಾದದ್ದು.....